# 9. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಾಳಗಾರು, ತೀರ್ಥಹಳ್ಳಿ ತಾ






**ಶಿಕ್ಷಣವು ಮಾನವನಷ್ಟೆ ವಿಶಾಲವಾಗಿರಬೇಕು,** –ಎಮರ್‌ಸನ್

**“ ಅನುಭವಗಳ ಆಧಾರದಿಂದ ವರ್ತನೆಯಲ್ಲಿ ಉಂಟಾಗುವ ಬದಲಾವಣೆಯೇ ಕಲಿಕೆ”** –ಗೇಟ್ಸ್

ಶಿಕ್ಷಣವು ಅಭಿವೃದ್ಧಿಯ ಬೆನ್ನೆಲುಬು. ಶಿಕ್ಷಣ ಪದ್ಧತಿ ಯಾವುದೇ ಪದ್ಧತಿಯಂತೆ ಕ್ರಮವಾದ ನಿರ್ವಹಣೆ ಮತ್ತು ಸುಧಾರಣೆ ಬಯಸುತ್ತದೆ. ಕಾಲಕಾಲಕ್ಕೆ ಅಭಿವೃದ್ಧಿ ನವೀನ ತಂತ್ರಜ್ಞಾನ ಮಕ್ಕಳು ಹಾಗೂ ಜನಜೀವನದ ಅವಶ್ಯಕತೆ, ಆಕಾಂಕ್ಷೆಗಳಿಗೆ ತಕ್ಕಂತೆ ರೂಪುಗೊಂಡ ಮತ್ತು ಅಳವಡಿಸಲ್ಪಟ್ಟ ಶೈಕ್ಷಣಿಕ ಪ್ರಯತ್ನಗಳು ಉಪಯುಕ್ತವೂ, ಪರಿಣಾಮಕಾರಿಯೂ ಆಗಬಲ್ಲದು.

ಪ್ರತಿಯೊಂದು ಮಗುವೂ ತನ್ನ ಪರಿಸರದಲ್ಲಿ ಇರುವ ಸನ್ನಿವೇಶಗಳು, ಅನುಭವಗಳನ್ನು ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುವ ಮೂಲಕ ಕಲಿಕೆಯನ್ನು ಉಂಟುಮಾಡಿಕೊಳ್ಳುತ್ತದೆ. ಮಗು ಮನಸ್ಸಿನಲ್ಲಿ ಅದರದೇ ಆದ ರೀತಿಯಲ್ಲಿ ಜ್ಞಾನವನ್ನು ರಚಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಮಗುವಿನಲ್ಲಿ ಆಗುವ ಕಲಿಕೆಯ ಬೋಧಕರ ಸಹಾಯ ಅಥವಾ ಅನುಭವಗಳ ಕ್ರಮಬದ್ಧ ಜೋಡಣೆಯಾಗಿರಬೇಕು. ಪ್ರತಿಯೊಂದು ಹೊಸ ಕಲಿಕೆಯೊಂದಿಗಿನ ಪೂರ್ವಜ್ಞಾನ, ಅನುಭವಗಳ ಆಧಾರದ ಮೇಲೆ ಸಂಯೋಜಿಸಿ ಕಟ್ಟಿಕೊಳ್ಳುವಂತದಾಗಿರುತ್ತದೆ. ಹಾಗಾಗಿ ಶಿಕ್ಷಣದ ಸಾರ್ವತ್ರಿಕರಣ ಗುಣಮಟ್ಟದ ಕಲಿಕೆ ಅಪೇಕ್ಷಿತ ಕಲಿಕೆ ಸಾಧಿಸಲು ಕೈಗೊಂಡ ಹೊಸವಿಧಾನವೆ ನಲಿ–ಕಲಿ.

ನಲಿಕಲಿ ಕಾರ್ಯಕ್ರಮವು ಮೊದಲು 1995–96ರಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಅನುಷ್ಠಾನ ಬಂದಿತ್ತು. 2008–09 ರಲ್ಲಿ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಅನುಷ್ಠಾನಕ್ಕೆ ತರಲಾಯಿತು. ಸ.ಕಿ.ಪ್ರಾ.ಶಾಲೆ ಬಾಳಗಾರಿನಲ್ಲಿ 2008–09 ನೇ ಸಾಲಿನಿಂದ ನಲಿ–ಕಲಿ ಪದ್ಧತಿಯನ್ನು ಆಳವಡಿಸಿಕೊಳ್ಳಲಾಯಿತು. ಇದಕ್ಕು ಮೊದಲು ಶಾಲೆಯ ಶಿಕ್ಷಕಿಯರಿಗೆ ನಲಿ–ಕಲಿ ಪದ್ಧತಿಯ ಬಗ್ಗೆ ತರಬೇತಿ ನೀಡಲಾಗಿತ್ತು. ನಲಿ–ಕಲಿ ಪದ್ಧತಿ ಆಳವಡಿಸಿಕೊಳ್ಳಲು ಬೇಕಾದ ಬೌತಿಕ ಸೌಲಭ್ಯಗಳಾದ ವಾಲ್‌ಸ್ಲೇಟ್, ಪಪೆಟ್ ಶೋ ಸ್ಟ್ಯಾಂಡ್, ಗಣಕಯಂತ್ರ, ಕಲಿಕ ಚಪ್ಪರ, ನೆಲದ ಮೇಲೆ ಕಲಿಕ ತಟ್ಟೆಗಳು, ಕಲಿಕೋಪಕರಣಗಳನ್ನು ತಯಾರಿಸಿ ಜೋಡಿಸಿಟ್ಟುಕೊಳ್ಳಲಾಯಿತು. ತರಬೇತಿಯಲ್ಲಿ ನೀಡಿದ ಸೂಚನೆಗಳಂತೆ ಹವಾಮಾನ ನಕ್ಷೆಯಲ್ಲಿ ಹವಾಮಾನ ಗುರುತಿಸುವುದು ಪ್ರಗತಿ ನೋಟ ವೀಕ್ಷಿಸಿ ಕಾರ್ಡ್ ಪಡೆಯುವುದು, ತಟ್ಟೆಯಲ್ಲಿ ಕುಳಿತುಕೊಳ್ಳುವುದು, ಕಲಿಕೆ ದೃಢೀಕರಣದ ನಂತರ ಪ್ರಗತಿ ನೋಟದಲ್ಲಿ ಗುರುತು ಹಾಕುವುದು ಹೀಗೆ

ಸುಗಮಕಾರರು ಮಕ್ಕಳಿಗೆ ಕಾಲಕಾಲಕ್ಕೆ ಅಗತ್ಯ ಸೂಚನೆ, ಮಾರ್ಗದರ್ಶನ ನೀಡುತ್ತ ಕಲಿಕೆ ಸಾಗಿತ್ತು. ಹೀಗೆ ಸಾಗಿದ ಕಲಿಕಾ ಪದ್ಧತಿ, ಮಕ್ಕಳಲ್ಲಿ ಅಚ್ಚರಿಯ ಫಲಿತಾಂಶ ನೀಡಿತು. ಸಂತಸದಾಯಕ ಕಲಿಕೆ ಸ್ವಕಲಿಕೆ, ಸ್ವವೇಗದ ಕಲಿಕೆ ಕಂಡುಬಂತು. ಪ್ರತಿ ಮಗುವು ಸರಾಗವಾಗಿ ಓದುವುದು, ತಪ್ಪಿಲ್ಲದೆ ಬರೆಯುವುದು, ಗಣಿತದ ಮೂಲಕ್ರಿಯೆಗಳನ್ನು ತಾನೇ ಸ್ವತಃ ಖುಷಿಯಿಂದ ತಪ್ಪಿಲ್ಲದೆ ಮಾಡುವುದನ್ನು ಕಲಿಯಿತು. ತನ್ನ ಸುತ್ತಲಿನ ಪರಿಸರದ ವೀಕ್ಷಣೆ, ಕುತೂಹಲಕ್ಕೆ ಉತ್ತರ ಪಡೆಯುವುದು, ಪರಿಸರ ಅರಿತುಕೊಳ್ಳುವುದು, ತನ್ನ ಅಗತ್ಯತೆಗಳ ಬಗ್ಗೆ ತಿಳಿದುಕೊಂಡಿತು. ಪ್ರತಿ ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸುವುದು ಕಂಡಾಗ ಸಾರ್ಥಕತೆ ಭಾವನೆ ಮೂಡಿತು.

## ಶೈಕ್ಷಣಿಕ ಯಶೋಗಾಥೆ:–

2008–2009 ರಿಂದ ಶಾಲೆಯಲ್ಲಿ ನಲಿ–ಕಲಿ ವಿಧಾನವನ್ನು 1ರಿಂದ 3ನೇ ತರಗತಿ ವರೆಗೂ ಅಳವಡಿಸಿಕೊಂಡಿದ್ದು, ಮಕ್ಕಳು ಗುಂಪು ಚಲನೆಗನುಗುಣವಾಗಿ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದು ಸ್ವಕಲಿಕೆ, ಸ್ವವೇಗದ ಕಲಿಕೆ, ಸಂತಸದ ಕಲಿಕೆ ಮಾಡುತ್ತಿದ್ದಾರೆ. ಬೋಧನೆ ಹಾಗೂ ಕಲಿಕೆಯಲ್ಲಿ ಕ್ಲಸ್ಟರ್ ಹಾಗೂ ತಾಲ್ಲೂಕಿನಲ್ಲಿ ಉತ್ತಮ ಕಲಿಕಾ ವಾತಾವರಣ ಹೊಂದಿದನ ಶಾಲೆಯೆಂದು ಗುರುತಿಸಲ್ಪಟ್ಟಿದೆ.

ಇಲಾಖೆ ನೀಡಿದ ತರಬೇತಿಗನುಗುಣವಾಗಿ ಮಕ್ಕಳಿಗೆ ಕಲಿಕಾ ಮಾರ್ಗದರ್ಶನ ನೀಡಲಾಗುತ್ತಿದೆ. ನಲಿ–ಕಲಿ ವಿಧಾನದಂತೆ ನಲಿ–ಕಲಿ ತರಗತಿಯಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಕಲಿಕಾ– ಚಪ್ಪರ ವಾಲ್ ಸ್ಲೇಟ್‌ಗಳು, ಗಣಕಯಂತ್ರ, ಪಪೆಟ್ ಶೋ ಸ್ಟಾಂಡ್ ಹಾಗೂ ಸ್ಕ್ರೀನ್, ಗೊಂಬೆಗಳು, ಗಣಕಯಂತ್ರ ಸೂಕ್ತ ಕಲಿಕೋಪರಣಗಳನ್ನು ಹಾಗೂ ಕಲಿಕಾ ತಟ್ಟೆಗಳನ್ನು ರಚಿಸಿ ಜೋಡಿಸಲಾಗಿದೆ. ಎಲ್ಲವೂ ಮಕ್ಕಳಿಗೆ ಕೈಗೆ ಸುಲಭವಾಗಿ ಸಿಗುವಂತೆ ಬಳಸಲು ಆಗುವಂತೆ ಸೂಕ್ತವಾಗಿ ಜೋಡಿಸಿಡಲಾಗಿದೆ. ಮಕ್ಕಳ ಗುಂಪು ಚಲನೆಗನುಗುಣವಾಗಿ ನೆಲದ ಮೇಲೆ ತಟ್ಟೆ ರಚಿಸಲಾಗಿದೆ. ಮಕ್ಕಳಿಗೆ ಕೂರಲು ಅನುಕೂಲವಾಗುವಂತೆ ಚಾಪೆಗಳು, ನಲಿ–ಕಲಿ ಕಾರ್ಡ್‌ಗಳನ್ನು ಕ್ರಮವಾಗಿ ತರಗತಿವಾರು, ವಿಷಯವಾರು, ಜೋಡಿಸಿಡಲು ಚೀಲಗಳನ್ನು ರಚಿಸಲಾಗಿದೆ. ಮಕ್ಕಳು ಮಾಡಿದ ಕ್ರಾಫ್ಟ್‌ಗಳು ಯೋಜನೆಗಳನ್ನು ಕಲಿಕಾ ಚಪ್ಪರದಲ್ಲಿ ಸುಂದರವಾಗಿ ಜೋಡಿಸಿಡಲಾಗಿದೆ. ಮಕ್ಕಳನ್ನು ಸಮೀಕ್ಷೆಗೆಂದು ಹೊರಗಡೆ ಕರೆದೊಯ್ದುದಾಗ ಸಿಕ್ಕಂತಹ ಹಕ್ಕಿ ಪುಕ್ಕಗಳು, ಬೀಜಗಳು, ಬಣ್ಣದ ಕಲ್ಲುಗಳು, ಗೂಡುಗಳನ್ನು ಸಂಗ್ರಹಿಸಿ ಕಲಿಕಾ ಸಂದರ್ಭದಲ್ಲಿ ಸೂಕ್ತವಾಗಿ ಬಳಕೆ ಮಾಡಲಾಗುತ್ತದೆ. ಹೀಗಾಗಿ ನಮ್ಮ ಶಾಲೆಯ ಎಲ್ಲಾ ಮಕ್ಕಳು ಕಲಿಕೆಯಲ್ಲಿ ಆಸಕ್ತಿ ಹೊಮದಿದ್ದು, ಉತ್ತಮ ಶ್ರೇಣಿಯಲ್ಲಿ ಕಲಿಕಾ ಸಾಧನೆ ಹೊಂದಿದ್ದಾರೆ. ಇಲಾಖೆ ನಡೆಸಿದ ಮೈಕ್ರೋ ಅಧ್ಯಯನದಲ್ಲಿ ಉತ್ತಮ ಶ್ರೇಣಿ ಹಾಗೂ ಅಭಿಪ್ರಾಯ ಪಡೆದಿದೆ. ರಾಜ್ಯಮಟ್ಟದಲ್ಲಿ ನಲಿ–ಕಲಿ ಉತ್ತಮ ಶಾಲೆಯೆಂದು ಗುರುತಿಸಲ್ಪಟ್ಟಿದೆ. ಈ ಸಾಧನೆಗೆ ಮಕ್ಕಳ ಪೋಷಕರ, ಎಸ್‌ಡಿಎಮ್‌ಸಿಯವರ ಸಹಕಾರ ಮಾರ್ಗದರ್ಶನ ನೆರವಾಗಿದೆ. ಹಾಗೂ ಕಾಲಕಾಲಕ್ಕೆ ಇಲಾಖೆ ನೀಡಿದ ತರಭೇತಿಗಳು, ಮಾರ್ಗದರ್ಶನಗಳು ಕೂಡ ಸಹಕಾರಿಯಾಗಿದೆ. ಇವರಿಗೆ ನಮ್ಮ ಕೃತಜ್ಞತೆಗಳು.





ಸ.ಕಿ.ಪ್ರಾ ಶಾಲೆ ಬಾಳಗಾರಿನಲ್ಲಿ ಪ್ರತಿದಿನದ ತರಗತಿಯ ಸಾಮೂಹಿಕ ಚಟುವಟಿಕೆಯೊಂದಿಗೆ ಆರಂಭಗೊಂಡ ನಂತರ ಕಲಿಕಾರ್ಥಿಗಳು ಪ್ರಗತಿ ನೋಟ ವೀಕ್ಷಣೆ ಮಾಡಿ ಅವರ ಅವರ ಕಾರ್ಡ್‌ಗಳನ್ನು ಸ್ವತಃ ತಾವೇ ತೆಗೆದುಕೊಂಡು ಸಂಬಂಧಿಸಿದ ತಟ್ಟೆಯಲ್ಲಿ ಕುಳಿತುಕೊಳ್ಳುವರು. ನಂತರ ಸುಗಮಕಾರರು 5 ನೇ ತಟ್ಟೆಯಿಂದ ಮಾರ್ಗದರ್ಶನ ಮಾಡಿ ನಂತರ ಕಲಿಕಾಂಶದ ತಟ್ಟೆಯಲ್ಲಿ ಕುಳಿತುಕೊಂಡು ತರಗತಿ ನಿರ್ವಹಣೆ ಮಾಡುವರು. ತರಗತಿಯ ಕೊನೆಯ ಹಂತದಲ್ಲಿ ಕಲಿಕೆಯಾಗಿದ್ದಲ್ಲಿ ಕಲಿಕೆಯ ದೃಢೀಕರಣವನ್ನು ಪ್ರಗತಿ ನೋಟದಲ್ಲಿ ಗುರುತಿಸುವರು. ಮತ್ತು ಸುಗಮಕಾರರು ನಲಿ–ಕಲಿ ದಿನಚರಿಯಲ್ಲಿ ನಮೂದಿಸುವರು.



















ಈ ಚಟುವಟಿಕೆಯನ್ನು ಮಕ್ಕಳು ನಿರ್ವಹಿಸಲು ಮಕ್ಕಳು ಕಾರ್ಡ್‌ಬೋರ್ಡ್ ನಿಂದ ಗಣಕಯಂತ್ರ ಮಾದರಿ ತಯಾರಿಸಿದ್ದು, ಪ್ರಶ್ನಾಕಾರ್ಡ್ ಮತ್ತು ಉತ್ತರದ ಕಾರ್ಡ್‌ಗಳನ್ನು ಸಿದ್ಧಪಡಿಸಿಕೊಂಡಿದ್ದು ಸುಗಮಕಾರರ ಮಾರ್ಗದರ್ಶನದಲ್ಲಿ ಮಕ್ಕಳು ಈ ಚಟುವಟಿಕೆಯನ್ನು ನಿರ್ವಹಿಸಿ ಕಲಿಕೆಯ ದೃಢೀಕರಣ ಮಾಡಲು ಸಹಾಯಕವಾಗಿದೆ.







ಆಹಾರದ ಅವಶ್ಯಕತೆ, ಆಹಾರದಲ್ಲಿರುವ ವಿವಿಧ ಪೋಷಕಾಂಶಗಳು ಅವುಗಳಿಂದಾಗುವ ಉಪಯೋಗದ ಬಗ್ಗೆ ಸ್ಪಷ್ಟವಾಗಿ ತಿಳಿಯಲು ಈ ಯೋಜನೆ ಸಹಾಯಕ. ಇದರಲ್ಲಿ ಮಕ್ಕಳು ತಾವೇ ಸ್ವತಃ ಭಾಗವಹಿಸಿ ಸಂಗ್ರಹಿಸುವುದರಿಂದ ಅವರಲ್ಲಿ ವಿಷಯದ ಪರಿಕಲ್ಪನೆ ಸ್ಪಷ್ಟವಾಗಿ ಮೂಡುತ್ತದೆ. ಕಲಿಕೆ ದೃಢಗೊಳ್ಳುತ್ತದೆ.







ಪಪೇಟ್ ಶೋ ಮಕ್ಕಳಿಗೆ ಕುತೂಹಲ ಹಾಗೂ ಆಕರ್ಷಣೆ ಹೆಚ್ಚಿಸುತ್ತದೆ. ಮಕ್ಕಳಲ್ಲಿ ಆಲೋಚನ ಶಕ್ತಿ, ಕಥೆ ಕಟ್ಟುವುದು ಹಾಗೂ ತಮ್ಮದೇ ಕಲ್ಪನಲೋಕ ಕಟ್ಟಿಕೊಳ್ಳಲು ನೆರವಾಗುತ್ತದೆ. ತಮ್ಮದೇ ಆದ ರೀತಿಯಲ್ಲಿ ಕಥೆ ಹೇಳಲು ಕಲಿಯುತ್ತಾರೆ. ಇದರಿಂದ ಅವರಲ್ಲಿ ವಾಕ್ಯ ರಚನೆ, ಧ್ವನಿ ಏರಿಳಿತ ಭಾವ ವ್ಯಕ್ತ ಪಡಿಸುವಿಕೆ ಮುಂತಾದ ಸಾಮರ್ಥ್ಯ ಹೆಚ್ಚುತ್ತದೆ.

ನೀರಿನ ಮೂಲಗಳ ವಿಧಗಳು, ನೀರಿನ ಉಪಯೋಗ, ನೀರಿನ ಸಂರಕ್ಷಣೆಯ ಬಗ್ಗೆ ಸಮೀಕ್ಷೆ ಹಾಗೂ ಹೊರಸಂಚಾರ ಕೈಗೊಳ್ಳುವುದರಿಂದ ಮಕ್ಕಳು ನೀರಿನ ಮೂಲಗಳನ್ನು ಕಣ್ಣಾರೆ ಕಂಡು ನೀರಿನ ಬಳಕೆಯ ಬಗ್ಗೆ ತಿಳಿಯುವರು, ತೋಟಕ್ಕೆ ನೀರು ಹಾಯಿಸುವುದು, ಮನೆ ಬಳಕೆಗೆ, ಪ್ರಾಣಿ ಪಕ್ಷಿಗಳಿಗೆ ನೀರಿನ ಅವಶ್ಯಕತೆ ತಿಳಿಯುವುದು ಹಾಗೆಯೇ ನೀರಿನ ಮೂಲಗಳ ಸುತ್ತಮುತ್ತ ಸ್ವಚ್ಚವಾಗಿಟ್ಟುಕೊಳ್ಳುವುದರ ಅಗತ್ಯತೇ ಬಗ್ಗೆ ತಿಳಿಯುವರು.




ವಸತಿಯ ಅಗತ್ಯ, ಮನೆ ಕಟ್ಟಲು ಬೇಕಾದ ಸಾಮಾಗ್ರಿಗಳು ಮನೆ ಕಟ್ಟುವ ಚಟುವಟಿಕೆಗಳ ಬಗ್ಗೆ ಸ್ಥಳೀಯ ಬೇಟಿ ಇದರಿಂದ ಮಗು ವಿವಿಧ ರೀತಿಯ ಮನೆಗಳು, ಪಕ್ಕ ಮನೆ, ಕಚ್ಚಾ ಮನೆ ವೀಕ್ಷಣೆ ಮಾಡುತ್ತದೆ. ವ್ಯತ್ಯಾಸ ತಿಳಿಯುತ್ತದೆ. ಉತ್ತಮ ಮನೆಯ ಲಕ್ಷಣಗಳ ಬಗ್ಗೆ ಅರಿಯುತ್ತದೆ. ಸ್ವತಃ ಕಣ್ಣಾರೆ ನೋಡಿ ತಿಳಿಯುತ್ತದೆ.

ಯೋಜನೆಗಳು:– ಪರಿಸರ ಅದ್ಯಯನಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಗಳನ್ನು ಮಕ್ಕಳು ತಯಾರಿಸಿರುತ್ತಾರೆ. ಹಬ್ಬಗಳು, ಆಹಾರದ ವಿಧಗಳು, ಸಸ್ಯಹಾರಿ ಮಾಂಸಹಾರಿ ಮಿಶ್ರಹಾರಿ ಪ್ರಾಣಿಗಳು, ವಿವಿದ ರೀತಿಯ ಎಲೆಗಳು, ಪ್ರೇಕ್ಷಣೀಯ ಸ್ಥಳಗಳು, ಸಾರಿಗೆಯ ವಿಧಗಳು, ನೀರಿನ ಮೂಲಗಳು, ಇತ್ಯಾದಿ ಯೋಜನೆಗಳನ್ನು ತಯಾರಿಸಿದ್ದು, ಇದು ಮಕ್ಕಳಲ್ಲಿ ಸೃಜನಾತ್ಮಕತೆ ಮೂಡಿಸುತ್ತದೆ. ಸಂಗ್ರಹ ಮನೋಭಾವ ವ್ಯವಸ್ಥಿತ ಜೋಡಣೆ ಸಾಮರ್ಥ್ಯ ಬೆಳೆಸುತ್ತದೆ.

ಕೃತಿಸಂಪುಟ:– ಕೃತಿಸಂಪುಟದಲ್ಲಿ ಮಗುವಿನ ಮಾಹಿತಿ ಹಾಗೂ ಒಳಪುಟಗಳಲ್ಲಿ ಮಗುವಿನ ಆಸಕ್ತಿ, ಗುಣ ಸ್ವಭಾವದ ಬಗ್ಗೆ ವಿವರ ಹಾಗೂ ಮಗು ಕಲಿಕಾ ವರ್ಷದಲ್ಲಿ ಮಾಡಿದ ಚಟುವಟಿಕೆಗಳ ವಿವರ, ಮೌಲ್ಯಮಾಪನದ ಹಾಳೆಗಳು, ಯೋಜನೆಗಳು ಹಾಗೂ ಮಗುವಿನ ಬಗ್ಗೆ ಶಿಕ್ಷಕರ ಅಭಿಪ್ರಾಯ, ಕಲಿಕಾ ಪ್ರಗತಿಯ ಬಗ್ಗೆ ಮಾಹಿತಿ ಇರುತ್ತದೆ.





ರಾಷ್ಟ್ರೀಯ ದಿನಚಾರಣೆಗಳಂದು ಆ ದಿನಚಾರಣೆಯ ಉದ್ದೇಶ ಹಿನ್ನಲೆಯ ಬಗ್ಗೆ ಮಕ್ಕಳು ಭಾಷಣ ಬರೆದುಕೊಂಡು ಆ ದಿನ ಭಾಷಣ ಮಾಡುತ್ತಾರೆ. ಇದರಿಂದ ಮಗುವಿನಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಹಾಗೂ ಆ ದಿನಚಾರಣೆಯ ಉದ್ದೇಶ ಸ್ಪಷ್ಟಗೊಳ್ಳತ್ತದೆ.



ಪ್ರತಿ ಶನಿವಾರ ಶಾಲೆಯಲ್ಲಿ ಮಕ್ಕಳಿಗೆ ದೈಹಿಕ ವ್ಯಾಯಾಮದೊಂದಿಗೆ ಸರಳ ಯೋಗಾಸನಗಳನ್ನು ಮಾಡಿಸಲಾಗುತ್ತದೆ. ಇದರಿಂದ ಮಕ್ಕಳಲ್ಲಿ ಉತ್ಸಾಹ ಏಕಾಗ್ರತೆ ಹೆಚ್ಚುತ್ತದೆ

ಸರಳ ಪ್ರಯೋಗಗಳು ಮಕ್ಕಳಲ್ಲಿ ಆಸಕ್ತಿ, ಕುತೂಹಲ ಹೆಚ್ಚಿಸುತ್ತದೆ. ವಸ್ತುಗಳ ಗುಣಸ್ವಭಾವಗಳ ಬಗ್ಗೆ ತಿಳಿಯುತ್ತಾರೆ. ಪ್ರತಿ ಗುರುವಾರದಂದು ನಲಿ–ಕಲಿಯಲ್ಲಿ ಹಾಗೂ ಕಲಿ–ನಲಿಯಲ್ಲಿ ಇರುವ ಸರಳ ಪ್ರಯೋಗಗಳು ಹಾಗೂ ಚಟುವಟಿಕೆಗಳನ್ನು ಮಾಡಲಾಗುತ್ತದೆ.







ರಾಜ್ಯಮಟ್ಟದಲ್ಲಿ ತಾಲೂಕಿನ ಉತ್ತಮ ನಲಿ–ಕಲಿ ಶಾಲೆಯಿಂದ ಗುರುತಿಸಲ್ಪಟ್ಟು ಬಹುಮಾನ ಪಡೆದ ಸಂತಸದ ಕ್ಷಣ

